ಅವನ ಹಿನ್ನೆಲೆಯೂ ಕೂಡ ನಿಮಗೆಲ್ಲಾ ಗೊತ್ತಿದೆ. ಅದನ್ನೆಲ್ಲಾ ಬಹಳ ವಿವರವಾಗಿ ಇಲ್ಲಿ ಹೇಳುವಂತ ಅಗತ್ಯವಿಲ್ಲ. ಕೋರ್ಟ್ ಕಛೇರಿಗಳಲ್ಲಿ ವಿವಾದಿತ ಸ್ಥಳದ ಬಗ್ಗೆ ಪ್ರಕರಣದ ವಿಚಾರಣೆ ನಡೆಯುತ್ತಿರುವಂತಹ ಸಂದರ್ಭದಲ್ಲಿ ಅದರ ನಿರ್ಣಯ ಆಗುವವರೆಗೆ, ಡಿ.ಸಿ.ಯವರು ನಿರ್ಣಯವನ್ನು ಕೊಡುತ್ತೇನೆ ಅಲ್ಲಿಯವರೆಗೆ ಯಥಾಸ್ಥಿತಿ ಕಾಪಾಡಿಕೊಂಡು ಹೋಗಬೇಕು ಎಂದು ಸೂಚನೆ ಕೊಟ್ಟಂತಹ ಸಂದರ್ಭದಲ್ಲೂ ಸಹಿತ ಈ ಎಸ್ಪಿ ಬಂದ ಮೇಲೆ ಅಲ್ಲಿ ಗಲಾಟೆ ಮಾಡಲು ಪ್ರಚೋದನೆ ಕೊಟ್ಟು, ಒಂದು ಕೋಮಿನವರನ್ನು ಎಬ್ಬಿಸಿ ಇವತ್ತು ಅಲ್ಲಿ ಗೊಂದಲ ಆಗಲಿಕ್ಕೆ ಗಲಾಟೆ ಮಾಡಲಿಕ್ಕೆ ಕಾರಣೀಭೂತನಾಗಿದ್ದಾನೆ. ಈ ದಿಸೆಯಲ್ಲಿ ಎಸ್ಪಿ ನಿರ್ಲಕ್ಷ್ಯತನ ತೋರಿದ್ದಾರೆ. ಆ ವೈಫಲ್ಯದ ಆಧಾರದ ಮೇಲೆ ಆ ಎಸ್ಪಿಯನ್ನು ತಕ್ಷಣ ಸಸ್ಪೆಂಡ್ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಗೃಹ ಸಚಿವರು ಈ ವಿಷಯದಲ್ಲಿ ರಾಜಕೀಯ ಬೆರೆಸಬಾರದು ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ.

ಅಧ್ಯಕ್ಷರು : ಅಲ್ಲಿಯ ಪರಿಸ್ಥಿತಿ ಈಗ ಕಾಮ್ ಆಗಿದೆ, ಇಲ್ಲಿ ನಾವು ಕಾಮ್ ಆಗಿ ಇರೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಒಬ್ಬ ಸಚಿವರೂ ಅಲ್ಲಿಗೆ ಹೋಗಿಲ್ಲ, ಶಾಸಕರೂ ಹೋಗಿಲ್ಲ, ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಇಲ್ಲಿದ್ದಾರೆ. ಅಧಿಕಾರಿಗಳು ಕೊಟ್ಟ ರಿಪೋರ್ಟ್ ಮೇಲೆ ಇವರು ಸುಮ್ಮನೆ ಕೂತಿದ್ದಾರೆ. ಅಲ್ಲಿ ಏನು ನಡೆಯುತ್ತಿದೆ ಇವರಿಗೇ ಗೊತ್ತಿಲ್ಲ. ಅದು ಯಾವ ರಿಪೋರ್ಟ್ ಬರುತ್ತಿದೆ ಎಂದು ತಾವು ನೋಡಿ. ಎಸ್.ಪಿಯವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಎಸ್.ಪಿ.ಯ ಕರ್ತವ್ಯದಲ್ಲಿ ವೈಫಲ್ಯ ಆಗಿದೆ, ರಾಣೆಬೆನ್ನೂರಿನಲ್ಲಿ ಬೂದಿ ಮುಚ್ಚಿದ ಕೆಂಡದಂತಹ ಪರಿಸ್ಥಿತಿ ಉದ್ಭವವಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಬಹಳ ಗಂಭೀರವಾದ ವಿಷಯ. ನಾವು ರಚನಾತ್ಮಕವಾದ ಸಂದೇಶವನ್ನು ಕಳುಹಿಸಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ಪ್ರಕ್ಷುಬ್ಧವಾದ ವಾತಾವರಣ ಇದೆ, ಯಾರೂ ವಿಸಿಟ್ ಮಾಡುವುದಕ್ಕೆ ಹೋಗಲಿಲ್ಲ, ಎಸ್ಪಿಯವರು ಪರಿಸ್ಥಿತಿಯನ್ನು ನಿರ್ಲಕ್ಷ್ಯ ಮಾಡಿದ್ದರೂ ಸರ್ಕಾರದವರು ಮೌನವಹಿಸಿದ್ದಾರೆ. ಸರ್ಕಾರ ಇದಕ್ಕೆ ಇಂಬು ಕೊಡುತ್ತಿದೆ. ಈ ವ್ಯವಸ್ಥೆಯ ವಿರುದ್ಧ ನಾನು ಮತ್ತು ನನ್ನ ಪಕ್ಷದ ಸದಸ್ಯರು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಗಮನ ಸೆಳೆಯುವ ಸೂಚನೆ

ಮಹಾನಗರ ಪಾಲಿಕೆಗಳ ನೌಕರರನ್ನು ವರ್ಗಾಯಿಸುವ ಬಗ್ಗೆ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುವುದು

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಅಧ್ಯಕ್ಷರೆ, ಮಹಾನಗರ ಪಾಲಿಕೆಗಳ

ನೌಕರರನ್ನು ವರ್ಗಾಯಿಸುವ ಬಗ್ಗೆ ನಾನು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

+ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಶ್ರೀ ವಿಜಯಕುಮಾರ್ ಶೆಟ್ಟಿಯವರು ರಾಜ್ಯದ ಮಹಾನಗರ ಪಾಲಿಕೆಗಳ ನೌಕರರನ್ನು ಪರಸ್ಪರ ವರ್ಗಾವಣೆ ಕುರಿತು ಕೋರಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ ಈ ರೀತಿ ಇದೆ.

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ 91-ಎ ಪ್ರಕಾರ ಮಹಾನಗರ ಪಾಲಿಕೆಯ ಅಧಿಕಾರಿಗಳು ಅಥವಾ ನೌಕರರನ್ನು ಇತರೆ ನಗರ ಪಾಲಿಕೆ ಅಥವಾ ಸ್ಥಳೀಯ ಸಂಸ್ಥೆಗಳಿಗೆ ಸರಿಸಮವಾದ ಹುದ್ದೆಗೆ ವರ್ಗಾಯಿಸಲು ಸರ್ಕಾರಕ್ಕಿರುವ ಅಧಿಕಾರವನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಾಗಿದ್ದು, ಈ ಬಗ್ಗೆ ಉಚ್ಚ ನ್ಯಾಯಾಲಯವು ಎಲ್ಲಾ ಮಹಾನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ, ಸಾಮಾನ್ಯವಾದ ಒಂದು ವೃಂದ ಕೇಂದ್ರೀಯ ಸೇವೆಯನ್ನು ಜಾರಿಗೆ ತರುವವರೆಗೆ ಕರ್ನಾಟಕ ಮಹಾನಗರ ಪಾಲಿಕೆ ಅಧಿನಿಯಮ 1976ರ ಕಲಂ 91-ಎ ಜಾರಿ ಮಾಡಬಾರದೆಂದು ಆದೇಶಿಸಿದೆ. ಆದ್ದರಿಂದ ನಗರ ಪಾಲಿಕೆಗಳ ಎಲ್ಲಾ ವಿಧದ ಹುದ್ದೆಗಳಿಗೆ ಸಂಬಂಧಿಸಿದಂತೆ ಒಂದು ಏಕರೂಪದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಅವಶ್ಯಕತೆ ಇದೆ.

ಸರ್ಕಾರದ ಆದೇಶ ಸಂಖ್ಯೆ ನಅಇ 148 ಬಿಎಂಎಸ್ 99 ದಿನಾಂಕ 29.12.99ರ ಆದೇಶದಲ್ಲಿ ಮಹಾನಗರ ಪಾಲಿಕೆಗಳ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ನೌಕರರುಗಳನ್ನು ವರ್ಗಾವಣೆ ಮಾಡಲು ಪ್ರಸ್ತುತ ಇರುವ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಸಲಹೆ ಸೂಚನೆಗಳನ್ನೊಳಗೊಂಡ ವರದಿ ನೀಡಲು ಪೌರಾಡಳಿತ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಉಪ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.

ಮಹಾನಗರ ಪಾಲಿಕೆ ನೌಕರರ ಸಮಗ್ರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಹೊರಡಿಸುವ ಸಲುವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆಯೊಂದಿಗೆ ಸಂಪರ್ಕಿಸಿ ಪರಿಶೀಲಿಸಲಾಗುತ್ತಿದೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳ ವರ್ಗಾವಣೆ ಬಗ್ಗೆ ಪ್ರಕರಣ ಈಗ ಕೋರ್ಟಿನಲ್ಲಿದೆ ಎಂದು ಹೇಳುತ್ತಾರೆ. ಚಿಕ್ಕಮಗಳೂರು ಪುರಸಭೆಯಲ್ಲಿ ನಿನ್ನೆ ತಾನೆ 11 ಜನರಿಗೆ ವರ್ಗಾವಣೆ ಮಾಡಿದ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಸಚಿವರು ತಮ್ಮ ಉತ್ತರದಲ್ಲಿ ಈ ಪ್ರಕರಣ ಕೋರ್ಟಿನಲ್ಲಿದೆ, ಏಕ ರೂಪದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚನೆ ಮಾಡಬೇಕೆಂದು ಹೇಳುತ್ತಿದ್ದಾರೆ. ಆದರೆ ಚಿಕ್ಕಮಗಳೂರಿನಲ್ಲಿ 11 ಜನ ನೌಕರರಿಗೆ ವರ್ಗಾವಣೆ ಮಾಡಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ಇಲ್ಲಿ ನಗರಸಭೆ ಆಡಳಿತಕ್ಕೆ ಶಸ್ತ್ರ ಚಿಕಿತ್ಸೆ ಕಲ್ಪಿಸುವ ಮೊದಲ ಹಂತದಲ್ಲಿ 11 ಜನರಿಗೆ ದಿಡೀರ್ ವರ್ಗಾವಣೆ ಮಾಡಲಾಗಿದೆ. ಸಾರ್ವಜನಿಕರು ಮತ್ತು ನಗರಸಭೆ ಸರ್ವ ಸದಸ್ಯರ ವ್ಯಾಪಕ ದೂರು ಆಧರಿಸಿ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ. ಕರ್ನಾಟಕದಲ್ಲಿರುವಂತಹ ಮಹಾ ನಗರಪಾಲಿಕೆಗಳಲ್ಲಿ ವ್ಯವಸ್ಥೆ ಅತ್ಯಂತ ಹಾಳಾಗಿದೆ. ಅವರು ಬಹಳಷ್ಟು ಬೇರೂರಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಮೀಷನರ್‌ರವರನ್ನು ನೌಕರರು ಸೇರಿಕೊಂಡು

ವರ್ಗಾವಣೆ ಮಾಡುವವರೆಗೆ ಹೋಗಿದ್ದರು. ಮಾನ್ಯ ಮುಖ್ಯಮಂತ್ರಿಯವರು ಕೊನೆಯಲ್ಲಿ ವರ್ಗಾವಣೆ ನಿಲ್ಲಿಸಿದ್ದಾರೆ. ಏಕೆಂದರೆ ಈಗಿನ ಕಮಿಷನರ್‌ರವರು ಒಳ್ಳೆಯ ಅಧಿಕಾರಿಗಳಾಗಿದ್ದು, ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾರೆ ಎನ್ನುವ ದೃಷ್ಟಿಯಿಂದ ವರ್ಗಾವಣೆಯನ್ನು ನಿಲ್ಲಿಸಿದ್ದಾರೆ. ಪ್ರತಿಯೊಂದು ಮಹಾನಗರ ಪಾಲಿಕೆಯಲ್ಲಿ ಕರ್ನಾಟಕ ರಾಜ್ಯದಾದ್ಯಂತ ಮ್ಯುಚ್ಯುಯಲ್ ವರ್ಗಾವಣೆ ಮಾಡಲೇಬೇಕು. ಇಲ್ಲದಿದ್ದರೆ ಮಹಾನಗರ ಪಾಲಿಕೆ ಬಹುಶಃ ಆರ್‌ಟಿಒ ಕಛೇರಿಗಳು ಹಾಗೂ ಸೇಲ್ಸ್ ಟ್ಯಾಕ್ಸ್ ಕಛೇರಿಗಳ ತರಹ ಇನ್ನಷ್ಟು ದುಸ್ಥಿತಿಗೆ ಹೋಗುವ ವ್ಯವಸ್ಥೆ ಇದೆ. ಆದ್ದರಿಂದ ಸಾಧ್ಯವಾದಷ್ಟು ನೌಕರರ ವರ್ಗಾವಣೆ ಮಾಡಬೇಕು. ಮಾನ್ಯ ಚಿಮ್ಮನಕಟ್ಟಿಯವರು ಒಂದು ವರ್ಷದ ಮೊದಲು ನಾನು ವರ್ಗಾವಣೆ ಮಾಡುವ ವ್ಯವಸ್ಥೆ ಮಾಡುತ್ತೇನೆಂದು ಹೇಳಿದ್ದರು. ಒಂದು ವರ್ಷ ಕಳೆದರೂ ಇನ್ನೂ ಮಾಡುತ್ತಿಲ್ಲ. ಆದಷ್ಟು ಬೇಗ ಇದನ್ನು ಮಾಡಿದರೆ ನಮ್ಮ ಮಹಾನಗರ ಪಾಲಿಕೆಗಳು ಉತ್ತಮವಾಗುವುದಕ್ಕೆ ಸಾಧ್ಯ ಇದೆ. ತಾವು ಇದನ್ನು ಕಟ್ಟುನಿಟ್ಟಾಗಿ ಪಾಲಿಸುವ ಆದೇಶವನ್ನು ನಗರಾಭಿವೃದ್ಧಿ ಇಲಾಖೆಗೆ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಮಾನ್ಯ ನಗರಾಭಿವೃದ್ಧಿ ಸಚಿವರು) : ಮಾನ್ಯ ಸದಸ್ಯರ ಕಳಕಳಿ ಅರ್ಥ ಮಾಡಿಕೊಂಡಿದ್ದೇವೆ. ಮಾನ್ಯ ನಗರಾಭಿವೃದ್ಧಿ ಸಚಿವರು ಬಂದ ತಕ್ಷಣ ಮಾತನಾಡಿ ಅವರ ಸಮಸ್ಯೆ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಶೂನ್ಯ ವೇಳೆಯಲ್ಲಿ ಜರೂರು ವಿಷಯಗಳನ್ನು ಪ್ರಸ್ತಾಪಿಸುವ ಬಗ್ಗೆ

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರು ತಮ್ಮ ಗಮನಕ್ಕೆ ಕಳುಹಿಸಿದ್ದಾರೆ. ತಾವು ಮೊದಲಿನಿಂದ ಏನು ಹೇಳುತ್ತಿದ್ದೀರಿ, ಉತ್ತರ ಬಂದ ಮೇಲೆ ಹಾಕೋಣ ಎಂದು ಹೇಳಿದಿರಿ. ನಮ್ಮ ನಿಯಮಾವಳಿಯಲ್ಲಿ ಆ ರೀತಿ ಇಲ್ಲ. ಶೂನ್ಯ ವೇಳೆಯಲ್ಲಿ ವಿಷಯವನ್ನು ಸಭೆಯ ಗಮನಕ್ಕೆ ತಂದು ಆ ನಂತರ ಸರ್ಕಾರ ಉತ್ತರ ಕೊಡಬಹುದು. ನಿಯಮ 351ರ ಪ್ರಕಾರ ಉತ್ತರ ಬಂದಾಗ ಕೊಡುವುದಕ್ಕೆ ಅವಕಾಶ ಇದೆ. ಸರ್ಕಾರದಿಂದ ಉತ್ತರ ಬಂದಾಗ ನಾನು ಅವಕಾಶ ಕೊಡುತ್ತೇನೆಂದು ಹೇಳುವುದು ಸರಿ ಇಲ್ಲ. ನಮ್ಮ ಅನೇಕ ಸದಸ್ಯರು ವಿದ್ಯುತ್ ಬಗ್ಗೆ ಮೊನ್ನೆ ತಮ್ಮ ಗಮನ ಸೆಳೆದರು. ತೆರೆದ ಬಾವಿಗಳಲ್ಲಿ ಇರುವ ಪರಿಸ್ಥಿತಿ ಬಗ್ಗೆ ನಾನೂ ಕೂಡ ಕಳುಹಿಸಿದ್ದೆ, ಅದೂ ಕೂಡ ಬಂದಿಲ್ಲ. ನಮ್ಮ ಮಾನ್ಯ ಸದಸ್ಯರು ಅವರವರ ಕ್ಷೇತ್ರಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕಳುಹಿಸಿದ್ದಾರೆ. ನಾವು ಸುಮ್ಮನೆ ಮೂಕ ಪ್ರೇಕ್ಷಕರಾಗಿ ಇಲ್ಲಿ ಕೂತುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ನಾವು ಇಲ್ಲಿ ಬಂದಾಗ ನಮ್ಮ ಕರ್ತವ್ಯ ಮಾಡಬೇಕಾಗುತ್ತದೆ. ಅದಕ್ಕೆ ತಾವು ಅವಕಾಶ ಕೊಡಬೇಕಾಗುತ್ತದೆ. ದಯವಿಟ್ಟು ಅವರಿಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಕೊಡುವುದಿಲ್ಲವೆಂದು ಯಾರೂ ಹೇಳಲಿಲ್ಲ. ಬೈರೇಗೌಡರೇ ಅವರು ಹೇಳಿದ್ದು ನನಗೆ ಮನದಟ್ಟಾಗಿದೆ. ಶೂನ್ಯ ವೇಳೆಯಲ್ಲಿ ನಾಲ್ಕೈದು ಉತ್ತರಗಳು ಬಂದಿವೆ, ದಿನನಿತ್ಯವೂ ಎರಡೆರಡು